ತೋರಿಸು ಅಂತಿದ್ದಾಳಲ್ಲ' ಎಂದು ಮನಸ್ಸಿನಲ್ಲೇ ಬೈದುಕೊಂಡು, 'ಈ ರೀತಿ ಮಾತನಾಡಲು ನಿಮಗೆ ಮುಜುಗರ ಅನ್ನಿಸಲ್ವ?' ಎಂದೆ.

'ಅಯ್ಯೋ ಬಿಡ್ರಿ. ಲೈಟ್ ಆಫ್ ಆದ ಮೇಲೆ ಮುಜುಗರಕ್ಕೆಲ್ಲ ಆಸ್ಪದವಿರುತ್ತಾ?' ಮಾರ್ಮಿಕವಾಗಿ ನುಡಿದವಳು ಸುಂದರವಾಗಿ ನಗುತ್ತ, 'ಪರ್ಸ್ ದಪ್ಪ ಇದ್ದರೆ ನೀವೂ ಬರಬಹುದು. ಆದರೆ ನನ್ನ ಪ್ರಶ್ನೆಗೆ ಉತ್ತರ ಸಿಗಲಿಲ್ಲ' ಎಂದಳು.

'ಶಬ್ದ ಜ್ಞಾನವಿದೆ. ಆದರೆ ಅನುಭವಿ ಅಲ್ಲ. ನೀವು ಹೇಗೆ ಇದರಲ್ಲಿ ಸಿಲುಕಿಕೊಂಡ್ರಿ?' ಮನಸ್ಸು ಮುಂದುವರೆಸಲು ಇಚ್ಛಿಸದಿದ್ದರೂ ಮೆದುಳಿನಲ್ಲಿದ್ದ ಲೇಖಕ ಎಚ್ಚರನಾಗಿದ್ದ. 'ಇವಳ ವ್ಯಥೆಯೇ ನಿನ್ನ ಕಥೆಯಾಗಲಿ' ಲೇಖಕ ಪಿಸುಗುಟ್ಟಿದ್ದ.

ನನ್ನನ್ನೊಮ್ಮೆ ದುರುಗುಟ್ಟಿಕೊಂಡು ನೋಡಿದ ಪೂರ್ವಿಕಾ, 'ನಾನೇನು ಇದರಲ್ಲಿ ಸಿಕ್ಕಿಹಾಕಿಕೊಂಡಿದ್ದಲ್ಲ. ನಾನೇ ಇಷ್ಟಪಟ್ಟು ಸೇರಿಕೊಂಡಿದ್ದು. ನಮಗೂ ಆಸೆ ಇರಲ್ವ? ನೀವು ಮಾಡಿದರೆ ರಸಿಕತನ, ನಾವು ಮಾಡಿದರೆ ಹಾದರ ಅಲ್ವ?' ಕೇಳಿದಳು. 'ಹಾಗೇನಿಲ್ಲ' ಎನ್ನುತ್ತ ಸುಮ್ಮನಾದೆ. ಬುದ್ಧಿಯೂ ಕೂಡ ಮುಂದುವರೆಸುವುದು ಬೇಡವೆಂದಿತ್ತು. ಆದರೆ ಪೂರ್ವಿಕಾ ಬಿಡಲು ಸಿದ್ಧಳಿರಲಿಲ್ಲ.

'ವ್ಯಭಿಚಾರ, ಹಾದರ ಅಂತೆಲ್ಲ ಹೇಳ್ತೀರಲ್ಲ. ಹಾಗಿದ್ದರೆ ಲಿವ್ ಇನ್ ಟುಗೆದರ್‌ಗೆ ಏನು ಹೇಳ್ತೀರ? ನವೀಕರಿಸಿದ ವ್ಯಭಿಚಾರ! ಗಂಡ–ಹೆಂಡತಿಯಂತೆ ಬಾಳೋದಂತೆ... ಹೊಂದಾಣಿಕೆ ಆಗದಿದ್ದರೆ... ಶಬ್ದವನ್ನು ನೋಡಿ, ಹೊಂದಾಣಿಕೆ ಆಗದಿದ್ದರೆ! ಸುಮ್ಮನೆ ಬೇಜಾರಾದ ಮೇಲೆ ಅಂತ ಬಳಸಬಹುದಿತ್ತು. ಆದರೆ ಬಳಸಲ್ಲ. ಯಾಕೆ ಹೇಳಿ? ಮಡಿವಂತ ಸಮಾಜವಲ್ವ? ಹಾಗೆ ಬೇಜಾರಾದ... ಕ್ಷಮಿಸಿ, ಹೊಂದಾಣಿಕೆ ಆಗದಿದ್ದರೆ ಇನ್ನೊಬ್ಬರನ್ನು ಹುಡುಕಿಕೊಳ್ಳುವುದು. ಆಮೇಲೆ ಮತ್ತೊಂದು ದೇಹ. ನಾವು ಪ್ರತಿದಿನ ಮಾಡುವುದನ್ನು ಅವರು ತಿಂಗಳಿಗೋ ವರ್ಷಕ್ಕೋ ಮಾಡ್ತಾರೆ ಅಷ್ಟೆ. ಮದುವೆಯ ಆಡಂಬರ ಇಲ್ಲ, ಡಿವೋರ್ಸ್‌ನ ರಗಳೆ ಇಲ್ಲ. ನಾನು ಹೇಳಿದ್ದು ಸರಿ ಅಲ್ವ?'

'ಒಬ್ಬರಿಗೆ ಸರಿ ಅನ್ನಿಸಿದ್ದು ಇನ್ನೊಬ್ಬರಿಗೆ ತಪ್ಪು ಅಂತ ಅನಿಸುತ್ತದೆ. ಗಾದೆ ಮಾತೇ ಇದೆಯಲ್ಲ: ಅವರವರ ಭಾವಕ್ಕೆ, ಅವರವರ ಭಕುತಿಗೆ' ತ್ರಿಲೋಕಜ್ಞಾನಿಯಂತೆ ನಾನು ಹೇಳಿದೆ.

'ಎರಡೂ ದೋಣಿ ಮೇಲೆ ಕಾಲನ್ನು ಇಟ್ಟುಕೊಂಡಿದ್ದೀರ. ಹಾವು ಸಾಯಬೇಕು ಕೋಲು ಮುರಿಯಬಾರದು ಅನ್ನೋ ರೀತಿ. ಮಡಿವಂತ ಸಮಾಜದವರಲ್ವ?' ಧ್ವನಿಯಲ್ಲಿ ವ್ಯಂಗ್ಯ ಇಲ್ಲದಿದ್ದರೂ ಕಠೋರವಾಗಿತ್ತು.

ಮೀಸೆಗೆ ಮಣ್ಣು ಮೆತ್ತಿಸಿಕೊಳ್ಳಲು ನಾನು ಸಿದ್ಧನಿರಲಿಲ್ಲ. 'ಏನು ಮಾಡುವುದು ಈ ಸಮಾಜವೇ ಹಾಗೆ. ನೀವೇ ಹೇಳಿದಂತೆ ಇಲ್ಲಿ ಮಾತನಾಡುವ ಪ್ರತಿಯೊಂದು ಶಬ್ದಗಳನ್ನು ಸಮಯ ಸಂದರ್ಭ ನೋಡಿಕೊಂಡು ತುಂಬಾ ಹುಷಾರಾಗಿ ಹೆಕ್ಕಿ ಬಳಸಬೇಕು. ಕೊಂಚ ಲಯ ತಪ್ಪಿದರೂ ಇನ್ನೊಂದು ಅರ್ಥವಾಗಿಬಿಡುತ್ತದೆ ಅಥವಾ ತಮಗೆ ಬೇಕಾದ ರೀತಿಯಲ್ಲಿ ತಿರುಚಿಬಿಡುತ್ತಾರೆ. ಒಂದು ಚಿಕ್ಕ



ಉದಾಹರಣೆ ಕೊಡ್ತೀನಿ. ಇಬ್ಬರು ಸ್ನೇಹಿತರು; ಒಂದು ಗಂಡು, ಇನ್ನೊಂದು ಹೆಣ್ಣು. ಮಧ್ಯಾಹ್ನದ ಊಟದ ಸಮಯ ಆಗಿದೆ, ಆಫೀಸ್‌ನಲ್ಲಿದ್ದಾರೆ. ಆಗ ಗಂಡು 'ಬರ್ತೀರಾ?' ಅಂತ ಕೇಳಿದರೆ, ಅವಳು ಬಂದೆ ಅಂತಾನೋ ಅಥವಾ ನೀನು ಹೋಗು ನಾನು ಆಮೇಲೆ ಬರುತ್ತೇನೆ ಅಂತಾನೋ ಹೇಳುತ್ತಾಳೆ. ಈಗಲೂ ಊಟದ ಸಮಯ; ಆದರೆ ರಾತ್ರಿ. ಲಾಡ್ಜ್‌ವೊಂದರ ಎದುರಿಗೆ ನಿಂತಿದ್ದಾರೆ. ಆಗ ಇವನು 'ಬರ್ತೀರಾ' ಅಂತ ಕೇಳಿದರೆ! ಅರ್ಥ ಆಯ್ತು ಅಂದ್ಕೊಂಡಿದ್ದೀನಿ.'

ಪೂರ್ವಿಕಾ ಸ್ವಲ್ಪ ಹೊತ್ತು ಸುಮ್ಮನಿದ್ದು, 'ನಿಮ್ಮ ಪ್ರಕಾರ ಲೈಂಗಿಕತೆ ಅಂದರೆ ಏನು?' ಎಂದು ಕೇಳಿದಳು. ನಾನು ಮುಜುಗರದ ಮುಖಭಾವವನ್ನು ಹೊತ್ತಿದ್ದನ್ನು ಕಂಡು, 'ಲೈಂಗಿಕತೆ ಮುಕ್ತವಾಗಬಾರದು ಸರ್. ಲೈಂಗಿಕ ಜ್ಞಾನ ಮುಕ್ತವಾಗಬೇಕು. ಲೇಖಕ ಅಂತೀರಾ, ವಿಶಾಲಮನೋಭಾವ ಇರತ್ತೆ ಅಂದುಕೊಂಡಿದ್ದೆ' ಎನ್ನುತ್ತ ನನ್ನ ಅಹಂಗೆ ಪೆಟ್ಟು ನೀಡಿದ್ದಳು.

ನಾನು ಕಾವ್ಯಾತ್ಮಕ ಶಬ್ದಗಳಿಗಾಗಿ ತಡಕಾಡತೊಡಗಿದೆ. 'ಗಂಡು ಹೆಣ್ಣು ಒಂದಾಗುವ... ತುಂಬಾ ಸಾಮಾನ್ಯವಾಯಿತು' ಮನಸ್ಸು ನುಡಿಯಿತು. 'ಮಾನಸಿಕವಾಗಿ ಹತ್ತಿರವಾದವರು ದೈಹಿಕವಾಗಿ ಒಂದಾಗುವುದು... ಊಹುಂ, ತತ್ವಜ್ಞಾನಕ್ಕೆ ಹತ್ತಿರವಾಯಿತು. ತಪಿಸುವ ಎರಡು ಹೃದಯಗಳ ತಾಪದ ಆವೇಗವು ಒಂದಾಗಿ ಸೇರುವ ಶುಭ... ಬೇಡ ಕದ್ದಮಾಲಾಯಿತು. ಮಿಲನ, ಸಮಾಗಮ, ಕೂಡು, ಸೇರು... ಛೇ ಎಲ್ಲಾ ಬಳಸಿ ಬಳಸಿ ಸವಕಲಾದವು. ಯಾವ...'

ಪೂರ್ವಿಕಾಳಿಗೆ ಬಹುಶಃ ಇದು ಅರ್ಥವಾಗಿರಬೇಕು. ಅವಳು ನಗುತ್ತ, 'ಲಯ ತಪ್ಪದ ಶಬ್ದಗಳನ್ನು ಹುಡುಕುತ್ತಿದ್ದೀರ? ತೊಂದರೆ ತೆಗೆದುಕೊಳ್ಳಬೇಡಿ. ನಾನೇ ಹೇಳ್ತೀನಿ. ಒಬ್ಬಳು ವೇಶ್ಯೆಗೆ ಲೈಂಗಿಕತೆ ಅಂದರೆ ಹಣ ಸಂಪಾದಿಸಿಕೊಡುವ ಚುಂಬನದೊಂದಿಗೆ ಆರಂಭವಾಗಿ ಸ್ಖಲನದೊಂದಿಗೆ ಅಂತ್ಯವಾಗುವ ಒಂದು ಕ್ರಿಯೆ ಅಷ್ಟೆ. ಆದರೆ ಸಾಮಾನ್ಯ ಹೆಣ್ಣಿಗೆ, ಹೆಣ್ತನದ ಸಾರ್ಥಕತೆಯ ಅನುಭೂತಿ ಪಡೆಯುವ ಕ್ರಿಯೆ, ತನ್ನ ಕುಡಿಗಾಗಿ ಹಂಬಲಿಸಿದವಳ ಬಯಕೆಯನ್ನು ತೀರಿಸುವ ಕ್ರಿಯೆ. ಇನ್ನೂ ಹೇಳಬೇಕೆಂದರೆ ಗಂಡನ ಪ್ರೀತಿಯನ್ನು ಹಿಡಿದಿಟ್ಟುಕೊಳ್ಳಲು ಸಹಾಯ ಮಾಡುವ ಕ್ರಿಯೆ. ಆದರೆ ಗಂಡಸಿಗೆ ಕೇವಲ ತೃಷೆ ತೀರಿಸಿಕೊಳ್ಳುವ ಕ್ರಿಯೆ. ತಾನು ಗಂಡೆಂಬ ಅಧಿಕಾರವನ್ನು ಸ್ಥಾಪಿಸುವ ಕ್ರಿಯೆ' ಎಂದಳು.

ನಾನದಕ್ಕೆ ಸಹಮತಿಯನ್ನು ಸೂಚಿಸದೆ, 'ತಾನು ಬಯ... ಪ್ರೀತಿಸಿದ ಹೆಣ್ಣನ್ನು ಸಂತೃಪ್ತಿ ಪಡಿಸುವ, ನಾನು ನಿನ್ನವನೆಂದು ಹೇಳುವ ಕ್ರಿಯೆ ಎಂದು ಹೇಳಿದರೂ ಅದು ಎಷ್ಟು ಸರಿ ಎನ್ನುವುದು ನನಗೂ ಗೊತ್ತಿರಲಿಲ್ಲ. ಕಲಿತದ್ದು ಸೆಕೆಂಡ್ ಪಿಯು ಆದರೂ ಸುಮಾರು ತಿಳಿದುಕೊಂಡಿದ್ದೀರಿ' ಪೂರ್ವಿಕಾ ಹೊಗಳಿದಳು. ನಾನು ಅಟ್ಟ ಏರಲು ಇಷ್ಟು ಸಾಕಾಗಿತ್ತು. ಆದರೂ ತೋರಿಸಿಕೊಳ್ಳಬಾರದೆಂದು ದನಿಗೆ ಸಂಕೋಚದ ಬಣ್ಣವನ್ನು ಬಳಿದು, 'ಹಾಗೇನಿಲ್ಲ. ಪುಸ್ತಕಗಳನ್ನು ಓದಿ ತಿಳಿದುಕೊಂಡಿದ್ದೇನೆ ಅಷ್ಟೆ. ಅದಿರಲಿ, ನಿಮಗೆ ಹೇಗೆ ನಾನು ಸೆಕೆಂಡ್ ಪಿಯು ತನಕವಷ್ಟೆ ಕಲಿತದ್ದು ಅಂತ ಗೊತ್ತಾಯ್ತು?' ಕುತೂಹಲದಿಂದ ಕೇಳಿದೆ.

'ನಿಮ್ಮಮ್ಮ ತೋರಿಸಿದ ಹುಡುಗಿಯ ಫೋಟೊವನ್ನು ನೀವು ನೋಡಿಲ್ಲ ಅನ್ನಿಸುತ್ತೆ' – ತನ್ನ ವ್ಯಾನಿಟಿ ಬ್ಯಾಗನ್ನು ಹೆಗಲೇರಿಸಿಕೊಳ್ಳುತ್ತ ಪೂರ್ವಿಕಾ ಹೇಳಿದಳು.

'ನಿಮಗೆ ಹೇಗೆ...?'

'ನಾನೇ ಫಾಲ್ಗುಣಿ' ಎನ್ನುತ್ತ ನನಗೆ ಹೃದಯಾಘಾತವನ್ನು ನೀಡಿದ್ದಳು. ಬೆಪ್ಪನಂತೆ ಕುಳಿತುಬಿಟ್ಟೆ. ಫಾಲ್ಗುಣಿ ನಗುತ್ತ, 'ಜಾಸ್ತಿ ತಲೆ ಕೆಡಿಸಿಕೊಳ್ಳಬೇಡಿ. ನಾನೇನು ವೇಶ್ಯೆಯಲ್ಲ. ಕಾರಣಕ್ಕೂ ಸಮರ್ಥನೆಗೂ ವ್ಯತ್ಯಾಸವಿರುವಂತೆ ಜ್ಞಾನಕ್ಕೂ ಅನುಭವಕ್ಕೂ ತುಂಬಾ ವ್ಯತ್ಯಾಸವಿದೆ. ನೀವು ಒಂದು ಕೊಲೆ ಬಗ್ಗೆ ಕಥೆಯನ್ನು ಬರೆಯುವಿರಿ ಅಂತಾದರೆ ನಿಮಗೆ ಅದರ ಅನುಭವ ಇರಬೇಕು ಅಂತೇನು ಇಲ್ಲ. ಜ್ಞಾನವಿದ್ದರೆ ಸಾಕು' ಎಂದು ಹೇಳಿ ನನ್ನ ಒಂದು ಅನುಮಾನವನ್ನು ಬಗೆಹರಿಸಿದ್ದಳು.

ಹೊನ್ನಾವರ ಬಂತು. ಎದ್ದು ನಿಂತ ಫಾಲ್ಗುಣಿ ಮನಸೆಳೆಯುವ ಮಂದಹಾಸವನ್ನು ಬೀರಿ, 'ಉಡುಪಿಗೆ ಟ್ರೇನಿಂಗಿಗೆ ಅಂತ ಬಂದಿದ್ದೆ. ಸಂಜೆ ಮುಗಿಯಿತು' ಎಂದಳು. ನಾನು ಗಂಟಲಲ್ಲೇ ಸಿಕ್ಕಿಹಾಕಿಕೊಂಡ ಪ್ರಶ್ನೆಯನ್ನು ಬಾಯಿಗೆ ತರುವ ಪ್ರಯತ್ನದಲ್ಲಿದ್ದಾಗಲೇ, 'ನೀವು ಏನನ್ನು ಕೇಳಬೇಕೆಂದುಕೊಂಡಿದ್ದೀರ ಅನ್ನುವುದು ಅರ್ಥವಾಯ್ತು. ನಾನೇನು ಸಿಕ್ಕಸಿಕ್ಕ ಗಂಡಸರ ಬಳಿ ಮಾತನಾಡಲ್ಲ. ನಿಮ್ಮನ್ನು ನೋಡಿದ ತಕ್ಷಣವೇ ಗುರುತು ಹಿಡಿದೆ. ಆದರೆ ನೀವು ಆ ವಿಷಯದಲ್ಲಿ ಫೇಲ್ ಆದ್ರಿ. ಆಗಲೇ ಅಂದುಕೊಂಡೆ, ನೀವು ಬಹುಶಃ ನನ್ನ ಫೋಟೊವನ್ನು ಗಮನವಿಟ್ಟು ನೋಡಿಲ್ಲ ಅಂತ. ಅದು ಒಳ್ಳೆಯದೇ ಆಯಿತು ಬಿಡಿ. ನಿಮ್ಮ ಬಗ್ಗೆ ತಿಳಿದುಕೊಳ್ಳಲು ಅನುಕೂಲವಾಯಿತು' ಎಂದು ಹೇಳಿ ಬಸ್ಸಿನಿಂದ ಇಳಿದಳು. ನನ್ನ ಅನುಮಾನವೆಲ್ಲ ಬಗೆಹರಿದಿತ್ತು.

'ಹಾಗಿದ್ದರೆ ಮದುವೆಯ ಬಗ್ಗೆ ನಿಮ್ಮ ಅಭಿಪ್ರಾಯ?' ಕಿಟಕಿಯಿಂದ ತಲೆಯನ್ನು ಹೊರಹಾಕಿ ಕಾತರದಿಂದ ಕೇಳಿದೆ.

ಫಾಲ್ಗುಣಿ ಚಂದನೆಯ ನಗು ಸೂಸಿ ಹೇಳಿದಳು, 'ನಿಮ್ಮ 'ಆ ಕುತೂಹಲಕ್ಕೆ' ಸದ್ಯದಲ್ಲೇ ನಾನು ತೆರೆ ಎಳೆಯುತ್ತೇನೆ.'

ಪ್ರತಿಕ್ರಿಯಿಸಿ: **feedback@sudha.co.in**